## ಕರ್ನಾಟಕ ವಿಧಾನಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1363 (1498) |
| ಸದಸ್ಯರ ಹೆಸರು | ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | 17.03.2026 |
| ಉತ್ತರಿಸುವ ಸಚಿವರು | ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಹಾಯೋಜನೆ ವ್ಯಾಪ್ತಿಯನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ಹೌದು.<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಹಾಲಿ ಇರುವ ಸ್ಥಳೀಯ ಯೋಜನಾ ವ್ಯಾಪ್ತಿಯನ್ನು ವಿಸ್ತರಿಸುವ ಕುರಿತು ಪ್ರಸ್ತಾವನೆಯು ಪರಿಶೀಲನೆ ಹಂತದಲ್ಲಿರುತ್ತದೆ. |
| (ಆ) | ಯಾವ ಯಾವ ಪ್ರದೇಶಗಳನ್ನು ಹೊಸದಾಗಿ ಮಹಾಯೋಜನೆ ವ್ಯಾಪ್ತಿಗೆ ಸೇರಿಸಲು ಉದ್ದೇಶಿಸಲಾಗಿದೆ; | ಹಾಲಿ ಸ್ಥಳೀಯ ಯೋಜನಾ ವ್ಯಾಪ್ತಿಯಲ್ಲಿ ಬರುವ 19 ಗ್ರಾಮಗಳನ್ನು ಒಳಗೊಂಡಂತೆ, ಕರ್ತಿಕೆರೆ, ಕುರುವಂಗಿ, ದುಮ್ಮಿಗೆರೆ, ಶಿರಗುಂದ, ಮತ್ತಾವರ, ಮುಕ್ತಿಹಳ್ಳಿ ಹಾಗೂ ಕದ್ರಿಮಿದ್ರಿ, ಹುಕ್ಕುಂದ ಪೂರ್ಣ ಕಂದಾಯ ಗ್ರಾಮಗಳನ್ನು ಮಹಾಯೋಜನೆ ವ್ಯಾಪ್ತಿಗೆ ಸೇರಿಸಲು ಉದ್ದೇಶಿಸಲಾಗಿದ್ದು, ಗ್ರಾಮಗಳ ವಿವರಗಳನ್ನು **ಅನುಬಂಧ** ದಲ್ಲಿ ಒದಗಿಸಿದೆ. |
| (ಇ) | ಯಾವಾಗ ಹೊಸ ಮಹಾಯೋಜನೆಯನ್ನು ಅಳವಡಿಸಿಕೊಳ್ಳಲಾಗುವುದು; | ಹಾಲಿ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ:ನಅಇ 233 ಮೈಅಪ್ರಾ 2025(ಇ), ದಿನಾಂಕ:04.07.2025 ರಂದು ಚಿಕ್ಕಮಗಳೂರು ನಗರದ ಅಮೃತ್ ಸಿಟಿ ಯೋಜನೆ 1.0 ಅಡಿಯಲ್ಲಿ ಜಿಐಎಸ್ ಆಧಾರಿತ ಮಹಾಯೋಜನೆ(ಪರಿಷ್ಕೃತ-II)ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 13(1) ರನ್ವಯ ತಾತ್ಕಾಲಿಕ ಅನುಮೋದನೆ ನೀಡಲಾಗಿರುತ್ತದೆ.<br><br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಸ್ವೀಕೃತವಾಗಿರುವ ಚಿಕ್ಕಮಗಳೂರು ಸ್ಥಳೀಯ ಯೋಜನಾ ಪ್ರದೇಶದ GIS ಆಧಾರಿತ ಮಹಾಯೋಜನೆ |

| | | |
|---|---|---|
| (ಈ) | ಹಾಲಿ ಇರುವ ಮಹಾಯೋಜನೆಯ ಪರಿಷ್ಕೃತ ಮಹಾಯೋಜನೆಯನ್ನು ಅಂತಿಮಗೊಳಿಸಲಾಗಿದೆಯೇ? | (ಪರಿಷ್ಕೃತ-II) ಅಂತಿಮ ಪ್ರಸ್ತಾವನೆಯು ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯದ ಹಂತದಲ್ಲಿ ಪರಿಶೀಲಿಸಲಾಗುತ್ತಿದ್ದು, ಪ್ರಸ್ತಾವನೆಯು ಸರ್ಕಾರಕ್ಕೆ ಸ್ವೀಕೃತವಾದ ನಂತರ ನಿಯಾಮಾನುಸಾರ ಪರಿಶೀಲಿಸಿ ಅಂತಿಮ ಅನುಮೋದನೆ ನೀಡಲು ಕ್ರಮವಹಿಸಲಾಗುವುದು. |

**ಕಡತ ಸಂಖ್ಯೆ:ನಅಇ 94 ಮೈಅಪ್ರಾ 2026**

**(ಬಿ.ಎಸ್.ಸುರೇಶ)**

ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು.

# ಅನುಬಂಧ-1

**ಚಿಕ್ಕಮಗಳೂರು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಸಂಪೂರ್ಣ ಗ್ರಾಮಗಳ ವಿವರ**

| ಕ್ರ. ಸಂ. | ಗ್ರಾಮ | ವಿಸ್ತೀರ್ಣ (ಹೆಕ್ಟೇರ್) |
|---|---|---|
| 1. | ಅಲ್ಲಂಪುರ | 331.45 |
| 2. | ಬಾಳೇಹಳ್ಳಿ | 183.26 |
| 3. | ಬಸವನಹಳ್ಳಿ | 232.17 |
| 4. | ಚಿಕ್ಕಮಗಳೂರು | 488.29 |
| 5. | ದಂಟರಮಕ್ಕಿ | 221.24 |
| 6. | ರಾಮನಹಳ್ಳಿ | 183.29 |
| 7. | ಕೆಂಪನಹಳ್ಳಿ | 112.75 |
| 8. | ಹಿರೇಮಗಳೂರು | 1293.48 |
| 9. | ಉಪ್ಪಳ್ಳಿ | 382.59 |
| 10. | ಬೀಕನಹಳ್ಳಿ | 406.25 |
| 11. | ಬೀಕನಹಳ್ಳಿ ಕಾವಲು | 457.28 |
| 12. | ಗವನಹಳ್ಳಿ | 226.79 |
| 13. | ಹಂಪಾಪುರ | 123.87 |
| 14. | ಹುಳಿಯಾರಹಳ್ಳಿ | 245.91 |
| 15. | ಐಯ್ಯನಹಳ್ಳಿ | 94.26 |
| 16. | ಇಂದಾವರ | 1025.55 |
| 17. | ಕರಡಿಹಳ್ಳಿಕಾವಲು | 145.82 |
| 18. | ನಲ್ಲೂರು | 301.99 |
| 19. | ತೇಗೂರು | 296.44 |
| **ಒಟ್ಟು ಗ್ರಾಮಗಳು=19** | | **ಹಾಲಿ ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣ=6852.68 ಹೆಕ್ಟೇರ್** |
| 20. | ದುಮ್ಮಿಗೆರೆ | 119.24 |
| 21. | ಹುಕ್ಕುಂದ | 250.34 |
| 22. | ಕದ್ರಿಮಿದ್ರಿ | 491.33 |
| 23. | ಕರ್ತಿಕೆರೆ | 461.40 |
| 24. | ಕುರುವಂಗಿ | 1105.79 |
| 25. | ಮತ್ತಾವರ | 723.15 |
| 26. | ಮುಗ್ತಿಹಳ್ಳಿ | 160.44 |
| 27. | ಶಿರಗುಂದ | 275.98 |
| **ಒಟ್ಟು ಗ್ರಾಮಗಳು=08** | | **ಹೆಚ್ಚುವರಿ ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣ=3587.67 ಹೆಕ್ಟೇರ್** |
| **ಒಟ್ಟಾರೆ ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣ =10340.35 ಹೆಕ್ಟೇರ್** | | |

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ.